ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ. ಅರಕಲಗೂಡು ತಾಲ್ಲೂಕಿನಲ್ಲಿ ಅಂಡರ್‌ಗ್ರೌಂಡ್ ವಾಟರ್‌ಟೇಬಲ್ ತುಂಬಾ ಕೆಳಗಡೆ ಇದ್ದು ಕುಡಿಯುವ ನೀರಿಗಾಗಿ ಕೊರೆದ ಕೊಳವೆಬಾವಿಗಳು ಸಹ ವಿಫಲವಾಗುತ್ತಿರುವುದರಿಂದ ಕುಡಿಯುವ ನೀರಿನ ಸಮಸ್ಯೆಯ ನಿವಾರಣೆಗಾಗಿ ಅರಕಲಗೂಡು ತಾಲ್ಲೂಕಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಮುಂಬರುವ ಬೇಸಿಗೆಯ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಕಳೆದ ಮೂರು ತಿಂಗಳಿನಲ್ಲಿ ಹಾಸನ ಜಿಲ್ಲೆಗೆ ಸರ್ಕಾರದಿಂದ ರೂಪಾಯಿ 71.14 ಲಕ್ಷಗಳು ಬಿಡುಗಡೆ ಮಾಡಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಹಾಸನ ಇವರು ಈ ಮೇಲ್ಕಂಡ ಅನುದಾನವನ್ನು ಭಾಗಶಃ ವಿತರಣೆ ಮಾಡಿದ ತಾಲ್ಲೂಕುವಾರು ಹಣದ ವಿವರಗಳು ಈ ಕೆಳಕಂಡಂತಿದೆ.

ಬೇಲೂರು	ರೂ.	2.50 ಲಕ್ಷಗಳು
ಅರಕಲಗೂಡು	ರೂ.	3.75 ಲಕ್ಷಗಳು
ಹಾಸನ	ರೂ.	4.00 ಲಕ್ಷಗಳು
ಹೊಳೆ ನರಸೀಪುರ	ರೂ.	7.00 ಲಕ್ಷಗಳು
ಅರಸೀಕೆರೆ	ರೂ.	7.00 ಲಕ್ಷಗಳು
ಚನ್ನರಾಯಪಟ್ಟಣ	ರೂ.	7.00 ಲಕ್ಷಗಳು
ಆಲೂರು	ರೂ.	1.75 ಲಕ್ಷಗಳು
ಸಕಲೇಶಪುರ	ರೂ.	2.00 ಲಕ್ಷಗಳು
ಮೊತ್ತ	ರೂ.	35.00 ಲಕ್ಷಗಳು

ಅರಕಲಗೂರು ತಾಲ್ಲೂಕಿನಲ್ಲಿ ಅಂತರ್ಜಲಮಟ್ಟ ತುಂಬಾ ಕೆಳಗಿದ್ದು ಕೊರೆದ ಕುಡಿಯುವ ನೀರಿನ ಕೊಳವೆಬಾವಿಗಳು ಸಹಾ ಹೆಚ್ಚು ವಿಫಲವಾಗಿರುತ್ತವೆ. ಆದುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ಇವರು ಭಾಗಶಃ ಹಣದ ಅನುದಾನವನ್ನು ಅರಕಲಗೂಡು ತಾಲ್ಲೂಕಿಗೂ ಸಹಾ ಬಿಡುಗಡೆ ಮಾಡಿರುತ್ತಾರೆ. ಇದರ ಬಗ್ಗೆ ಈಗಾಗಲೇ ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳೂ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ನೀರಿನ ಅಭಾವವನ್ನು ನೀಗಿಸಲು ಸೂಕ್ತ ಸೂಚನೆಗಳನ್ನು ನೀಡಲಾಗಿದೆ ಮತ್ತು ಮುಂಬರುವ ಬೇಸಿಗೆಯ ಕಾಲದಲ್ಲಿ ಅವರುಗಳು ಯಾವುದೇ ರೀತಿಯ ದೂರುಗಳು ಬರದಂತೆ ನೋಡಿಕೊಳ್ಳಲು ಒಪ್ಪಿಕೊಂಡಿರುತ್ತಾರೆ.

(3) ಒತ್ತುವರಿಗಳನ್ನು ಸಕ್ರಮಗೊಳಿಸಲು ಬಗ್ಗೆ

ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಸುಮಾರು 20-25 ವರ್ಷಗಳಿಂದ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಕೃಷಿಕರಾಗಿ ಬೇಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಆದರೆ ಸರ್ಕಾರ ಯಾವುದೇ ರೀತಿಯಲ್ಲಿ ಆಶ್ರಯ ಮನೆಗಳಾಗಲೀ, ನೂರುಬಾವಿ ಯೋಜನೆಯಾಗಲಿ ಐಆರ್‌ಡಿಪಿ ಸಾಲವಾಗಲೀ, ಯಾವುದೇ ಸರ್ಕಾರ ಕೊಡುವ ಸೌಲಭ್ಯದಿಂದ ಇವರು ವಂಚಿತರಾಗಿರುತ್ತಾರೆ. ಸುಮಾರು ಆರು ತಿಂಗಳಿಂದ ಬೇರೆ

ಬೇರೆ ಕಾರಣಗಳಿಂದ ಸಮಿತಿ ಸಭೆ ಸೇರದೇ ಇರುವುದರಿಂದ ಆದಷ್ಟು ಬೇಗ ಈ ಅಕ್ರಮ ಒತ್ತುವರಿಯನ್ನು ಸಕ್ರಮಗೊಳಿಸುವ ಸಮಿತಿಗಳನ್ನು ರೂಪಿಸಬೇಕಾಗಿದೆ. ಅವುಗಳ ಮೂಲಕ ಭೂಮಿ ಮಂಜೂರಾದವರಿಗೆ ಹಕ್ಕುಪತ್ರವನ್ನು ತುರ್ತಾಗಿ ವಿತರಣೆ ಮಾಡಬೇಕೆಂದು ಈ ಸದನದ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಕ್ಕೆ ತಿದ್ದುಪಡಿ ಮಾಡಿ 1991ರಲ್ಲಿ ಕಲಂ 94-ಎ, ಇದನ್ನು ಕಾಯ್ದೆಯದಲ್ಲಿ ಸೇರ್ಪಡಿಸಿ ಕೆಲವು ವಿಶಿಷ್ಟ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ಕೆರೆ ಅಂಗಳ, ಗುಂಡುತೋಪು, ಅಮೃತ್ ಮಹಲ್ ಕಾವಲ್ ಮುಂತಾದ ಜಮೀನುಗಳನ್ನು ಹೊರತುಪಡಿಸಿ, ಗೋಮಾಳ ಸೇರಿದಂತೆ ಉಳಿದ ಸರ್ಕಾರಿ ಜಮೀನುಗಳಲ್ಲಿ ಕೃಷಿ ಉದ್ದೇಶಕ್ಕಾಗಿ ಆಗಿರುವ ಒತ್ತುವರಿಯನ್ನು ಸಕ್ರಮೀಕರಣಗೊಳಿಸುವ ಯೋಜನೆಯು ಜಾರಿಗೆ ಬಂದಿರುತ್ತದೆ. ಸದರಿ ಉಪ ಕಲಂ 94-ಎ ಇದರಂತೆ ಬಗರ್ ಹುಕುಂ ಸಾಗುವಳಿ ಜಮೀನು ಸಕ್ರಮೀಕರಣ ಸಮಿತಿಗೆ ತಾಲ್ಲೂಕಿನ ಶಾಸಕರು ಅಧ್ಯಕ್ಷರಾಗಿದ್ದಾರೆ. ಅರ್ಜಿ ಹಾಕಲು ಕಡೆ ದಿನವಾದ 19-9-1991 ರವರೆಗೆ ಒಟ್ಟು 10,86,826 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳ ಪೈಕಿ 6,25,425 ಅರ್ಜಿಗಳು ವಿಲೇವಾರಿಯಾಗಿದ್ದು, ಇನ್ನು 4,61,401 ಅರ್ಜಿಗಳು ಬಾಕಿ ಇರುತ್ತವೆ. ಈಗ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಈ ಸಮಿತಿಗೆ ಉಪ ವಿಭಾಗಾಧಿಕಾರಿಗಳು ಅಥವಾ ತತ್ಸಮಾನ ಕಂದಾಯ ಅಧಿಕಾರಿಗಳು ಅಧ್ಯಕ್ಷರಾಗಿರುವುದು ಪ್ರಕರಣಗಳ ವಿಲೇವಾರಿ ದೃಷ್ಟಿಯಿಂದ ಸೂಕ್ತವೆಂದು ಮನಗಂಡು ಈ ರೀತಿ ಉಪ ವಿಭಾಗಾಧಿಕಾರಿಗಳು ಅಥವಾ ತತ್ಸಮಾನ ಕಂದಾಯ ಅಧಿಕಾರಿಗಳನ್ನು ಸಮಿತಿ ಅಧ್ಯಕ್ಷರನ್ನಾಗಿ ನೇಮಿಸುವುದಕ್ಕಾಗಿ ಕಲಂ 94-ಎ ಇದಕ್ಕೆ ತಿದ್ದುಪಡಿ ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಆದಷ್ಟು ಶೀಘ್ರವಾಗಿ ಈ ಸಮಿತಿಗಳನ್ನು ಪುನರ್ ರಚಿಸಲಾಗುವುದು.

ಶಾಸನಾತ್ಮಕ ನಿರ್ಣಯ

ಅಧ್ಯಕ್ಷರು : ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿಗಳು) ಅವರು ನಿರ್ಣಯವನ್ನು ಮಂಡಿಸುವುದು.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಮಾನವ ಅಂಗಾಂಗಗಳ ಬದಲಿ ಜೋಡಣೆ ಅಧಿನಿಯಮ, 1994 (1994ರ ಕೇಂದ್ರ ಅಧಿನಿಯಮ 42)ನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಬೇಕೆಂಬ ನಿರ್ಣಯವನ್ನು ಮಂಡಿಸಲು ತಮ್ಮ ಒಪ್ಪಿಗೆಯನ್ನು ಕೋರುತ್ತೇನೆ.

(ನಿರ್ಣಯವನ್ನು ಮಂಡಿಸಲಾಯಿತು)

ಶ್ರೀ ಎ.ಬಿ. ಪಾಟೀಲ್ : ನಿರ್ಣಯವನ್ನು ಸದನ ಒಪ್ಪಿಕೊಳ್ಳಬೇಕೆಂದು ಕೋರುತ್ತೇನೆ. ಈ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ನಿಮ್ಮದೇನೂ ಅಮೆಂಡ್‌ಮೆಂಟ್ ಇಲ್ಲವೇ?

ಅಧ್ಯಕ್ಷರು : ಇದನ್ನು ಕೇಂದ್ರದಲ್ಲಿ ಈಗಾಗಲೇ ಅಳವಡಿಸಿಕೊಂಡಿದ್ದಾರೆ. ನೀವು ಇಲ್ಲಿ ಏನಾದರೂ ಅಮೆಂಡ್‌ಮೆಂಟ್ ಸೂಚನೆ ಮಾಡಿದ್ದೀರಾ ಎಂದು ಅವರು ಕೇಳುತ್ತಿರುವುದು.